Two youth from A.P. develop food forest

Their start-up company acts as a bridge between farmers and agriculture firms

K. SRINIVASA RAO
VIZIANAGARAM

A career in agriculture is, perhaps, not on the priority list of today's youth, more so for those hailing from the urban areas. It certainly is not the preferred option for the management and engineering graduates passing out from top institutions.

But here are two youth who have taken to tilling the land, and have proven that farming is indeed a lucrative career option despite many challenges such as skyrocketing prices of land, seed, and fertilizer, and rising labour charges.

Meet Naveen Perla, a graduate from Indian Institute of Management-Kolkata, and Sudheer Vajrapu, an engineering graduate from BITS Pilani (Hyderabad), who have made this possible.



Naveen Perla and Sudheer Vajrapu with the turmeric yield. ▪ SPECIAL ARRANGEMENT

Following the outbreak of COVID-19 pandemic and the consequent work-from-home method adopted by their companies headquartered in Mumbai, Naveen and Sudheer had to stay put in Vizianagaram.

Although they did not know each other previously, they met in a conference and exchanged views on various issues, including agriculture. As they discovered a shared vision in agriculture, they decided to go for it.

With little knowledge in farming, the task was certainly challenging for them. But help came from Sudheer's family members, who were into food processing business. With their guidance, Naveen and Sudheer took 25 acres of land on lease on the outskirts of Vizianagaram.

With suggestions from agriculture experts and retired horticulture officers, they adopted best practices in plots bifurcation, drip irrigation, and mulching, and developed a food forest by growing several varieties of vegetables, fruits and commercial crops, which included turmeric that is normally cultivated in the hilly areas.

As a majority of the crops came to yield in 45 to 60 days, they could taste their initial success in no time. The duo could achieve a turnover of about ₹40 lakh, besides providing direct and indirect employment to 1,200 people.

Naveen and Sudheer also established 'Frmr Ecosystems Private Limited', a start-up that could get recognition from the Union Ministry of Commerce and Industry. The company acts as a bridge between the farmers and agri-business companies.

02-03-2022
Hindu Pg 05

ಅಡಕೆ ನಿಷೇಧ ಹೇಳಿಕೆಯಿಂದ ಆತಂಕ

ಮಂಗಳೂರು: ಅಡಕೆ ಹಾನಿಕಾರಕ ಎಂಬ ಕಾರಣಕ್ಕೆ ಅದನ್ನು ನಿಷೇಧಿಸುವ ಪ್ರಸ್ತಾಪವು ಸರಕಾರದ ಮುಂದಿದೆ ಎಂದು ಕೇಂದ್ರದ ಸಚಿವರೊಬ್ಬರು ಹೇಳಿದ್ದಾರೆ. ಈ ವಿಷಯವು ಅಡಕೆ ಬೆಳೆಗಾರರಲ್ಲಿ ಆತಂಕ ಹುಟ್ಟಿಸಿದೆ. ಈಗಾಗಲೇ ಅಡಕೆ ಆರೋಗ್ಯಕ್ಕೆ ಹಾನಿಕರವಲ್ಲ ಎಂಬುದನ್ನು ವೈಜ್ಞಾನಿಕವಾಗಿ ನಿರೂಪಿಸಲು ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಸಂಶೋಧನೆ ನಡೆಯುತ್ತಿದೆ. ಈ ಮಧ್ಯೆ ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ನಿಷೇಧದ ಹೇಳಿಕೆ ನೀಡಿದ್ದಾರೆ.



2011ರಲ್ಲಿ ಯುಪಿಎ ಸರಕಾರ ಅಡಕೆ ಆರೋಗ್ಯಕ್ಕೆ ಹಾನಿ ಎಂದು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ವರದಿಯನ್ನು ನಂತರ ಎನ್‌ಡಿಎ ಸರಕಾರ ಕೂಡಾ ಪುನರುಚ್ಚರಿಸಿತ್ತು. 2019ರಲ್ಲಿ ಕಾಸರಗೋಡಿನ ಸಿಪಿಸಿಆರ್‌ಐ ಸಂಸ್ಥೆಯು ಅಡಕೆ ಆರೋಗ್ಯಕ್ಕೆ ಹಾನಿಕರವಲ್ಲ ಎಂಬ ವರದಿ ನೀಡಿತ್ತು.

ರೈತರ ದಾರಿ ತಪ್ಪಿಸಬೇಡಿ: ಕ್ಯಾಂಪ್ಕೊ

ಮಂಗಳೂರು: ಅಡಕೆ ಹಾನಿಕಾರ ಎಂದಾದರೆ ಅದನ್ನು ವೈಜ್ಞಾನಿಕವಾಗಿ ಸಾಬೀತು ಮಾಡಲಿ. ಅದನ್ನು ಬಿಟ್ಟು ಅನಗತ್ಯ ಹೇಳಿಕೆ ಮೂಲಕ ಗೊಂದಲ ಸೃಷ್ಟಿಸುವ ಅಗತ್ಯವಿಲ್ಲ ಎಂದು ಕ್ಯಾಂಪ್ಕೊ ಅಧ್ಯಕ್ಷ ಕಿರಣ್ ಕುಮಾರ್ ಕೊಡ್ಗಿ ಪ್ರತಿಕ್ರಿಯಿಸಿದ್ದಾರೆ. ''ಕೇಂದ್ರ ಸಚಿವರ ಹೇಳಿಕೆಯನ್ನು ನಾವು ಖಂಡಿಸುತ್ತೇವೆ. ನಾವು ಪ್ರಧಾನಿ, ಗೃಹ ಸಚಿವರು, ಆರೋಗ್ಯ ಸಚಿವರಿಗೆ ಅಡಕೆ ಆರೋಗ್ಯಕ್ಕೆ ಹಾನಿಕಾರವಲ್ಲ ಎಂಬ ವೈಜ್ಞಾನಿಕ ವರದಿಗಳನ್ನು ಈಗಾಗಲೇ ಸಲ್ಲಿಸಿದ್ದೇವೆ. ತೈವಾನ್ ವಿಶ್ವವಿದ್ಯಾಲಯ ಕೂಡಾ ಅಡಕೆ ಹಾನಿಕಾರಕವಲ್ಲ ಎಂದು ವರದಿ ನೀಡಿದೆ,'' ಎಂದಿದ್ದಾರೆ. ''ಸುಪ್ರೀಂ ಕೋರ್ಟ್‌ನಲ್ಲಿ ಅಫಿದವಿತ್ ಇದ್ದು, ಕ್ಯಾಂಪ್ಕೊ ಸಹಿತ ಹಲವು ಸಂಸ್ಥೆಗಳು ಮನವಿ ಸಲ್ಲಿಸಿದ್ದೇವೆ. ಅದರ ವಿಚಾರಣೆ ನಡೆಯುವಾಗ ಇಂಥ ಹೇಳಿಕೆ ಕೊಟ್ಟು ಸಚಿವರು ರೈತರ ದಾರಿ ತಪ್ಪಿಸಬಾರದು,'' ಎಂದಿದ್ದಾರೆ.

02-03-2022
Vk Pg 03

For more information visit
University Library Website
Web - uasbagrilibindia.org
E-mail- librarian@uasbangalore.edu.in

21 ಸಾಧಕರಿಗೆ ರೈತ ರತ್ನ ಪ್ರಶಸ್ತಿ ಪ್ರದಾನ

ಕರ್ನಾಟಕದ ಕೃಷಿ ಕ್ಷೇತ್ರದ ಸಾಧಕರಿಗೆ ನಿರ್ಮಲಾನಂದನಾಥ ಸ್ವಾಮೀಜಿ, ಬಿ.ಸಿ.ಪಾಟೀಲ್, ತಾರಾ ಅವರಿಂದ ಗೌರವ
ಬೆಂಗಳೂರಿನಲ್ಲಿ ಕನ್ನಡಪ್ರಭ, ಏಷ್ಯಾನೆಟ್ ಸುವರ್ಣ ನ್ಯೂಸ್‌ನಿಂದ ಅರ್ಥಪೂರ್ಣ ಕಾರ್ಯಕ್ರಮ, ಗಣ್ಯರಿಂದ ಮೆಚ್ಚುಗೆ

• ಕನ್ನಡಪ್ರಭ ವಾರ್ತೆ ಬೆಂಗಳೂರು

ಬಿಸಿಲು, ಮಳೆ, ಚಳಿ ಎನ್ನದೆ ನಿತ್ಯ ಬಿಡುವಿಲ್ಲದೆ ಬೆವರು ಸುರಿಸಿ ಇಡೀ ದೇಶಕ್ಕೆ ಅನ್ನ ನೀಡುವ ಅನ್ನದಾತರನ್ನು ಗೌರವಿಸುವುದು ಹೆಮ್ಮೆಯ ವಿಚಾರ. ಆದರೆಲ್ಲೂ ಎಲೆಮರೆ ಕಾಯಿಯಂತೆ ಇತರ ರೈತರಿಗೆ ಮಾದರಿಯಾಗುವಂತೆ ಕೃಷಿಯಲ್ಲಿ ತೊಡಗಿಕೊಂಡ ಶ್ರಮಜೀವಿ ರೈತರನ್ನು ಗುರುತಿಸುವುದು ರೈತ ಕುಲವನ್ನೇ ಗೌರವಿಸಿದಂತೆ.

ಅಂತೆಯೇ ಕನ್ನಡಪ್ರಭ- ಏಷ್ಯಾನೆಟ್ ಸುವರ್ಣ ನ್ಯೂಸ್ ಮಾಧ್ಯಮ ಸಮೂಹದ ಸಂಸ್ಥೆ ಇತ್ತೀಚೆಗೆ ರಾಜ್ಯ ರಾಜಧಾನಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕೃಷಿಯ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 21 ಮಂದಿ ಕೃಷಿ ಸಾಧಕ ರೈತರಿಗೆ ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಕೃಷಿ ಸಚಿವ ಬಿ.ಸಿ.ಪಾಟೀಲ್, ಕರ್ನಾಟಕ ಆರಣ್ಯ ಅಭಿವೃದ್ಧಿನಿಗಮದ ಅಧ್ಯಕ್ಷೆ ಕಾರಾ ಅನುರಾಧಾ ಅವರು 'ರೈತ ರತ್ನ' ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು.


ರೈತ ರತ್ನ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಆದಿಚುಂಚನಗಿರಿ ಮಹಾ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು.

ಹಾಮಾನ ವೈಪರೀತ್ಯ, ಸಾಲ ಬಾಧೆ ಸೇರಿದಂತೆ ಹಲವು ಸವಾಲುಗಳನ್ನು ದಿಟ್ಟವಾಗಿ ಎದುರಿಸಿ ಕೃಷಿ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿದ ಪ್ರಗತಿಪರ ರೈತರನ್ನು ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಆದ್ಧೂರಿ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ಕಡುಬಗೆರೆ ಮುನಿರಾಜು ಅವರು ಹಾಡಿದ ರೈತಗೀತೆ ಮತ್ತು ಸಾಯಿಕೀರ್ತಿ ಸ್ವಾಮೀಜಿ ಅವರ ಸಾಧ್ಯತೆಗಳ ಗೀತೆ ಮೂಲಕ ಕನ್ನಡಪ್ರಭ-ಏಷ್ಯಾನೆಟ್ ಸುವರ್ಣ ನ್ಯೂಸ್ 'ರೈತ ರತ್ನ ಸೀಜನ್ 2' ಕಾರ್ಯಕ್ರಮ ಆರಂಭವಾಯಿತು.

ರೈತರನ್ನು ಹುಡುಕಿ, ಗುರುತಿಸಿ, ಸನ್ಮಾನಿಸಿ, ಗೌರವಿಸುವ ಕನ್ನಡಪ್ರಭ-ಏಷ್ಯಾನೆಟ್ ಸುವರ್ಣ ನ್ಯೂಸ್ ಕೈಂಕರ್ಯಕ್ಕೆ ನಿರ್ಮಲಾನಂದನಾಥ ಸ್ವಾಮೀಜಿ, ಬಿ.ಸಿ.ಪಾಟೀಲ್ ಹಾಗೂ ತಾರಾ ಅವರು ಆತೀವ ಮೆಚ್ಚುಗೆ ವ್ಯಕ್ತಪಡಿಸಿದರು.

ಏಷ್ಯಾನೆಟ್ ಮೀಡಿಯಾ ಆ್ಯಂಡ್ ಎಂಟರ್‌ಟೈನ್‌ಮೆಂಟ್ ಎಕ್ಸಿಕ್ಯೂಟಿವ್ ಛೇರ್‌ಮನ್ ರಾಜೇಶ್ ಕಾಲ್ರಾ, ಕನ್ನಡಪ್ರಭ- ಏಷ್ಯಾನೆಟ್ ಸುವರ್ಣ ನ್ಯೂಸ್ ಪ್ರಧಾನ ಸಂಪಾದಕ ರವಿ ಹೆಗಡೆ, ಕಾರ್ಯಕ್ರಮದ ಪ್ರಾಯೋಜಕರಾದ ಇಂಡೋಸ್ ಟಿಎಂಟಿ ಇಂಡಸ್ಟ್ರೀಸ್ ವ್ಯವಸ್ಥಾಪಕ ನಿರ್ದೇಶಕ ಎಸ್.ಎಸ್.ಶ್ರೀಕಾಂತ್, ವಿ ಸ್ಟಾರ್ ಲೈಫ್‌ಸ್ಟೈಲ್ ಪ್ರಾಡಕ್ಟ್ಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಆಫ್ಸರ್ ಹಿಂದೂಸ್ತಾನಿ, ವಾಸವಿ ಹೆಲ್ತ್‌ಕೇರ್ ವ್ಯವಸ್ಥಾಪಕ ನಿರ್ದೇಶಕ ಡಿ.ಎಸ್ .ಪ್ರದೀಪ್, ಅಮೃತ್ ಆರ್ಗಾನಿಕ್ಸ್ ಫರ್ಟಿಲೈಜರ್ಸ್ ವ್ಯವಸ್ಥಾಪಕ ನಿರ್ದೇಶಕ ಕೆ.ನಾಗರಾಜ್, ಸಾಮಿತ್ರಿ ಗ್ರೂಪ್ ಆಫ್ ಕಂಪನೀಸ್ ಆಫ್ಸರ್ ಕೃಷಿತ್ರಿ ಪುರುಷೋತ್ತಮ, ರತ್ನಗಿರಿ ಇಂಪೆಕ್ಟ್ಸ್ ಸಿಇಂಡಿ ಎಸ್.ಎ.ವಾಸುದೇವಮೂರ್ತಿ, ಎಸ್‌ಪಿಎಸ್ ಆಗ್ರೋನೀಡ್ಸ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಸಾವಿತ್ರಿ ಶ್ರೀವರ್ಷ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮಾ.12, 13ರಂದು ಏಷ್ಯಾನೆಟ್ ಸುವರ್ಣ ನ್ಯೂಸ್‌ನಲ್ಲಿ ಪ್ರಸಾರ

ಮಾ.12ರ ಶನಿವಾರ ಹಾಗೂ ಮಾ.13ರ ಭಾನುವಾರ ದಂದು ಮಧ್ಯಾಹ್ನ ನಂತರ ಏಷ್ಯಾನೆಟ್ ಸುವರ್ಣ ನ್ಯೂಸ್ ಸುದ್ದಿವಾಹಿನಿ ಯಲ್ಲಿ 'ರೈತ ರತ್ನ' ಪ್ರಶಸ್ತಿ ಪ್ರದಾನ ಸಮಾರಂಭದ ಸಂಪೂರ್ಣ ಕಾರ್ಯಕ್ರಮ ಪ್ರಸಾರವಾಗಲಿದೆ.

ಪ್ರಶಸ್ತಿ ನೀಡುವುದೇ ನಮಗೆ ಹೆಮ್ಮೆ



ಸಾಕಷ್ಟು ಪ್ರಶಸ್ತಿಗಳನ್ನು ನೋಡಿದ್ದೇನೆ. ಆದರೆ, ಮತ್ತೊಬ್ಬರಿಗಾಗಿ ಪ್ರಾಮಾಣಿಕವಾಗಿ ಶ್ರಮಿಸುತ್ತಿರುವ ರೈತರನ್ನು ಗುರುತಿಸುತ್ತಿರುವ ರೈತರತ್ನ ಪ್ರಶಸ್ತಿ ನೀಡುತ್ತಿರುವುದು ಹೆಮ್ಮೆ ಎನಿಸುತ್ತದೆ. ಆತ್ಯಂತ ಪ್ರಮಾಣಿಕ ಮತ್ತು ಪಾರದರ್ಶಕವಾಗಿ ಆಯ್ಕೆ ಮಾಡಲಾಗಿದ್ದು ಇದಕ್ಕಾಗಿ ಕನ್ನಡಪ್ರಭ ಮತ್ತು ಸುವರ್ಣ-ನ್ಯೂಸ್ ತಂಡಕ್ಕೆ ಕಾರ್ಯಕ್ಕೆ ಶುಭಾಷಯಗಳು. ರತ್ನ ಎಂದರೆ ಪ್ರಶಸ್ತಿಗಳಲ್ಲಿಯೇ ಮೊದಲ ಸ್ಥಾನದ್ದಾಗಿದ್ದು, ಈ ಪ್ರಶಸ್ತಿಯನ್ನು ರೈತ ಸಮುದಾಯದ ಅತ್ಯುತ್ತಮ ರೈತರಿಗೆ ನೀಡುತ್ತಿರುವುದು ಹೆಮ್ಮೆಯ ವಿಚಾರ. ಈಗಾಗಲೇ ಸಂಸ್ಥೆ ವತಿಯಿಂದ ರಾಜ್ಯದಲ್ಲಿ ಅಸಾಮಾನ್ಯ ಕನ್ನಡಿಗ, ಉಜ್ವಲ ಉದ್ಯಮಿ, ಕರ್ನಾಟಕ ಉದ್ಯಮ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಸಾಧಕರನ್ನು ಗುರುತಿಸುವ ಕಾರ್ಯಕ್ಕೆ ಕೈಜೋಡಿಸಿದ ಪ್ರಾಯೋಜಕರಿಗೆ ಧನ್ಯವಾದಗಳು. 1971 ರಲ್ಲಿ ಸಿಂಡಿಕೇಟ್ ಬ್ಯಾಂಕ್ ಟಿ.ಎ.ಪೈ ಅವ್ಯಕ್ತರು ಭಾರತದ ಮೊದಲ ರೈತರ ಬ್ಯಾಂಕ್ ಆರಂಭಿಸಿದ್ದರು. ನಮ್ಮ ತಂದೆ ಆ ಬ್ಯಾಂಕ್‌ನ ಮ್ಯಾನೇಜರ್ ಆಗಿದ್ದರು ಎಂಬ ಹೆಮ್ಮೆ ನನಗಿದೆ. ಕೃಷಿ ಸಚಿವರು ಇಲಾಖೆಯಲ್ಲಿ ಉತ್ತಮ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದ್ದು, ಈ ಮೂಲಕ ಮುಂದಿನ ನಾಲ್ಕು ವರ್ಷಗಳಲ್ಲಿ ಕೃಷಿ ವಲಯ ಮತ್ತು ರೈತರ ಆದಾಯ ದ್ವಿಗುಣಗೊಳಿಸುವ ಗುರಿ ತಲುಪಲಿ ಎಂದು ಆಶಿಸುತ್ತೇನೆ. ಏಷ್ಯಾನೆಟ್ ಗ್ರೂಪ್ ಮಾಧ್ಯಮ ಏಳು ಭಾಷೆಗಳಲ್ಲಿ ಬರುತ್ತಿದ್ದು, ಎರಡು ಟಿವಿ ಮಾಧ್ಯಮ, ಎರಡು ರೇಡಿಯೋ, ದಿನಪತ್ರಿಕೆಗಳು, ಡಿಜಿಟಲ್ ಮಾಧ್ಯಮಗಳು ಕಾರ್ಯಾಚರಣೆಯಲ್ಲಿವೆ.

• ರಾಜೇಶ್ ಕಾಲ್ರಾ ಎಕ್ಸಿಕ್ಯೂಟಿವ್ ಚೇರ್ಮನ್, ಏಷ್ಯಾನೆಟ್ ಮೀಡಿಯಾ ಆ್ಯಂಡ್ ಎಂಟರ್‌ಟೈನ್‌ಮೆಂಟ್

ಕೃಷಿಗೆ ನೂತನ ತಂತ್ರಜ್ಞಾನ, ಸನಾತನ ಪದ್ಧತಿ ಎರಡೂ ಅವಶ್ಯಕ: ಚುಂಚಶ್ರೀ

ಜೆಡಿಪಿಯಲ್ಲಿ ಶೇ.50 ಇದ್ದ ಕೃಷಿ ಪಾಲು ಈಗ ಶೇ.20ಕ್ಕೆಳಿಕೆ: ಸ್ವಾಮೀಜಿ ಕಳವಳ
ಭವಿಷ್ಯದ ಆಹಾರ ಕೊರತೆ ತಡೆಗೆ ಯೋಜನೆ ರೂಪಿಸಿ: ನಿರ್ಮಲಾನಂದನಾಥ ಶ್ರೀ

• ಕನ್ನಡಪ್ರಭ ವಾರ್ತೆ ಬೆಂಗಳೂರು



ನೂತನ ತಂತ್ರಜ್ಞಾನ ಮತ್ತು ಸನಾತನ ಪದ್ಧತಿ ಎರಡನ್ನೂ ಒಳಗೊಂಡ ಲಾಭದಾಯಕ ಕೃಷಿಗೆ ಆದ್ಯತೆ ನೀಡಿದಾಗ ರೈತ ಮತ್ತು ದೇಶ ಅಭಿವೃದ್ಧಿ ಹೊಂದುತ್ತದೆ ಎಂದು ಆದಿಚುಂಚನಗಿರಿ ಮಹಾ ಸಂಸ್ಥಾನ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದರು.

ಸಮಾರಂಭದಲ್ಲಿ ಸಾಧಕ ರೈತರಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಸ್ವಾಮೀಜಿ, 5ಜಿ, ಕೃತಕ ಬುದ್ಧಿಮತ್ತೆ, ಕ್ಷೌಡ್ ತಂತ್ರಜ್ಞಾನದಂತಹ ಆಧುನಿಕ ತಂತ್ರಜ್ಞಾನಗಳು ದೇಶದಲ್ಲಿ ಲಭ್ಯವಿದೆ. ಇವುಗಳ ಜತೆಗೆ ಸನಾತನ ಪರಂಪರೆಗಳ ಹಿಂದಿನ ಪದ್ಧತಿಗಳನ್ನು ಜತೆಯಾಗಿಸಿಕೊಂಡು ಕೃಷಿಚಟುವಟಿಕೆಗಳನ್ನು ಲಾಭದಾಯ ಕವಾಗಿಸಲು ಮಾಡಬೇಕಿದೆ. ಆಗ ಮಾತ್ರ ನಮ್ಮ ದೇಶ ಮತ್ತು ರೈತರು ಬೆಳವಣಿಗೆಯಾಗುತ್ತಾರೆ ಎಂದರು.

ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ದೇಶದ ಜಿಡಿಪಿಯಲ್ಲಿ ಕೃಷಿ ವಲಯ ಪಾಲು ಶೇ.50 ರಷ್ಟಿತ್ತು. ಪ್ರಸ್ತುತ ದೇಶದಲ್ಲಿ ಕೃಷಿ ನಂಬಿ ಬದುಕುತ್ತಿರುವವರ ಸಂಖ್ಯೆ ಶೇ.70ರಷ್ಟಿದ್ದರೂ, ಜಿಪಿಡಿಗೆ ಕೃಷಿ ವಲಯದ ಪಾಲು ಕೇವಲ 20 ಮಾತ್ರ. ಸಾಕಷ್ಟು ಸಬ್ಸಿಡಿಗಳು, ಅವಕಾಶಗಳು, ಮಾನವ ಸಂಪನ್ಮೂಲಗಳು ಇದ್ದರೂ ದೇಶದ ಅಭಿವೃದ್ಧಿಗೆ ಕೃಷಿ ಕೊಡುಗೆ ತೀರಾ ಕಡಿಮೆ ಇರುವುದು ವಿಪರ್ಯಾಸ ಸಂಗತಿ. ತಂತ್ರಜ್ಞಾನ, ಮಾನವ ಸಂಪನ್ಮೂಲಗಳನ್ನು ಬಳಸಿ ರೈತರ ಉತ್ಪಾದನೆ ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರವು ಆಗತ್ಯ ಕ್ರಮಗಳು ಕೈಗೊಳ್ಳಬೇಕು. ಈ ಮೂಲಕ ರೈತ ವ್ಯವಸಾಯ ಮಾಡಿ ಸತ್ತ ಎಂಬ ಕಳಂಕದಿಂದ ಹೊರಬರಬೇಕಿದೆ ಎಂದು ಸಲಹೆ ನೀಡಿದರು.

ದೇಶದಲ್ಲಿ 1960ರಲ್ಲಿ ಇದ್ದ ಆಹಾರ ಕೊರತೆ ಸದ್ಯ ಇಲ್ಲ. ಆದರೆ, ಮುಂದಿನ ದಿನಗಳಲ್ಲಿ ಜಾಗತಿಕ ತಾಪಮಾನಕ್ಕೆ ಕೃಷಿ ಉತ್ಪಾದನೆ ಕುಸಿಯಿಂದ ಆತಂಕವಿದೆ. ಜತೆಗೆ ವಾಣಿಜ್ಯೀಕರಣ, ಕೈಗಾರಿಕೀಕರಣದಿಂದ ಕೃಷಿ ಭೂಮಿ ಕಡಿಮೆ ಯಾಗುತ್ತಿದೆ. ಇನ್ನೂಂದೆಡೆ ಮಹಾನಗರಗಳನ್ನು ಸೇರಿದಂತೆ ದೇಶಾದ್ಯಂತ ಜನಸಂಖ್ಯಾ ಸ್ಫೋಟವಾಗುತ್ತಿದೆ. ಇವೆಲ್ಲವುಗಳಿಂದ ಮತ್ತೆ ಆಹಾರ ಕೊರತೆ ಎದುರಾಗುವ ಸಾಧ್ಯತೆಗಳಿವೆ. ಈ ನಿಟ್ಟಿನಲ್ಲಿ ಭವಿಷ್ಯ ಚಿಂತನೆಗಳನ್ನು ನಡೆಸಿ ರೈತರಿಗೆ ಮತ್ತು ಆವರಕ್ಕೆ ಸಹಾಯಕವಾಗುವ ಕೃಷಿಚಟುವಟಿಕೆಗಳಿಗೆ ಪೂರಕವಾಗಿರುವ ಕಾನೂನು ಕ್ರಮಗಳು, ಯೋಜನೆಗಳನ್ನು ಜಾರಿಗೊಳಿಸಬೇಕು ಎಂದು ಸರ್ಕಾರಕ್ಕೆ ಸೂಚಿಸಿದರು.

ಕಾರ್ಯಾ ಮಾದರಿಯನ್ನು ಆಳವಡಿಸಿಕೊಳ್ಳವ ಮೂಲಕ ಜಾಗತಿಕ ತಾಪಮಾನಕ್ಕೆ ರೈತರಕೊಡುಗೆಯೇಡಬಹುದಾಗಿದೆ.ಬೆಂಗಳೂರಿನಂತಹ ಮಹಾನಗರಗಳಿಗೆ ರೈತರಿಂದ ಆಕ್ಸಿಜನ ಪೂರೈಕೆ ಸಾಧ್ಯವಾಗುತ್ತದೆ. ಇನ್ನು ಕೃಷಿ ಚಟುವಟಿಕೆಗಳನ್ನು ನಿರಾಕರಿಸಿ ಹಳ್ಳಿಗಳನ್ನು ತೊರೆಯುತ್ತಿರುವವರಿಗೆ ಕೃಷಿ ಕ್ಷೇತ್ರದತ್ತ ಆಸಕ್ತಿ ಹೆಚ್ಚಿಸಲು ಆಗತ್ಯ ವಾತಾವರಣವನ್ನು ನಿರ್ಮಾಣವಾಗಬೇಕೆದೆ ಎಂದು ಆಶಯ ವ್ಯಕ್ತಪಡಿಸಿದರು.

ಶ್ರೀಗಳ ಶ್ಲಾಘನೆ

ಏಷ್ಯಾನೆಟ್ ಸುವರ್ಣ ನ್ಯೂಸ್ ಮತ್ತು ಕನ್ನಡಪ್ರಭ ವತಿಯಿಂದ ಗುರುತಿಸಿ ಸನ್ಮಾನಿಸಿದ ಸಾಧಕರೇ ಮುಂದೆ ರಾಷ್ಟ್ರಮಟ್ಟದ ಅತ್ಯುನ್ನತ ಪ್ರಶಸ್ತಿಗಳಿಗೆ ಆಯ್ಕೆಯಾಗುತ್ತಿದ್ದಾರೆ. ಆ ಮೂಲಕ ಮಾ ಸಂಸ್ಥೆಗೆ ಇದೊಂದು ಹೆಮ್ಮೆಯ ವಿಚಾರವಾಗಿದೆ. ತೆರೆಮರೆಯಲ್ಲಿರುವ ಸಮಾಜದ ಸಾಧಕರನ್ನು ಗುರುತಿಸುವುದು ಮತ್ತು ಪ್ರಶಸ್ತಿಗೆ ಅವರನ್ನು ಆಯ್ಕೆ ಮಾಡುತ್ತಿರುವ ಪ್ರಕ್ರಿಯೆ ಅತ್ಯುತ್ತಮವಾಗಿದೆ ಎಂದು ಚುಂಚನಗಿರಿ ಶ್ರೀಗಳು ಶ್ಲಾಘಿಸಿದರು.

ನಮ್ಮ ಹೊಣೆ ನಿಭಾಯಿಸುತ್ತಿದ್ದೇವೆ



ಜೈ ಜವಾನ್ ಜೈ ಕಿಸಾನ್ ಎಂಬ ಮಾತನ್ನು ರೈತ ರತ್ನ ಪ್ರಶಸ್ತಿ ಮೂಲಕ ಕಾರ್ಯರೂಪಕ್ಕೆ ತರಲಾಗಿದೆ. ಸಾಧಕ ರೈತರನ್ನು ಗುರುತಿಸುವ ಮೂಲಕ ನಮ್ಮ ಸಾಮಾಜಿಕ ಹೊಣೆಗಾರಿಕೆ ನಿಭಾಯಿಸುತ್ತಿದ್ದೇವೆ. ಸಾಮಾಜದಲ್ಲಿರುವ ಸಾಧಕ ರೈತರನ್ನು ಹುಡುಕಿ ಎಲ್ಲರ ಮುಂದಿಟ್ಟು ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿ ಪಡೆಯುತ್ತಿರುವ ಪ್ರತಿಯೊಬ್ಬ ರೈತರು ಕೂಡಾ ಅನರ್ಘ್ಯ ರತ್ನ. ಇಂತಹ ಮಾದರಿ ರೈತರ ಸಂತತಿ ಹೆಚ್ಚಾಗಿ ಕೃಷಿ ಕ್ಷೇತ್ರ ಹಸನಾಗಬೇಕು ಎಂಬ ಉದ್ದೇಶ ಹೊಂದಿದ್ದೇವೆ. ರೈತರಿಗೆ ಮಾತ್ರವಲ್ಲದೆ ಮಳೆ ಯರಿಗೆ, ಯುವಕರಿಗೆ, ಶೌರ್ಯವನ್ನು ತೋರಿಸಿದ ವೀರರಿಗೆ, ಉದ್ಯಮವಲಯದ ಸಾಧಕರಿಗೆ, ನಮ್ಮ ಜತೆಯಲ್ಲಿಯೇ ಇರುವ ಸಾಮಾನ್ಯ ರಂತಿರುವ ಅಸಾಮಾನ್ಯ ಕನ್ನಡಿಗರಿಗೆ ಪ್ರಶಸ್ತಿ ನೀಡುತ್ತಿದ್ದೇವೆ. ಈ ಮೂಲಕ ಹಲವು ವಲಯಗಳ ಸಾಧಕರನ್ನು ಗುರುತಿಸಲಾಗುತ್ತಿದೆ. ನಮ್ಮ ಸಂಸ್ಥೆಯ ಪ್ರಶಸ್ತಿಗಳಿಗೆ ಆಯ್ಕೆಯಾದವರು ಮುಂದಿನ ದಿನಗಳಲ್ಲಿ ಜಿಲ್ಲಾಮಟ್ಟದಿಂದ ಹಿಡಿದು ರಾಷ್ಟ್ರಮಟ್ಟದ ಪದ್ಮ ಪ್ರಶಸ್ತಿಗಳಿಗೂ ಭಾಜನವಾಗುತ್ತಿದ್ದಾರೆ ಎಂಬ ಹೆಮ್ಮೆ ನಮಗಿದೆ. ಆಯ್ಕೆಗೆ ಅತ್ಯುತ್ತಮ ಮಾನದಂಡ ಬಳಸಲಾಗುತ್ತಿದ್ದು, ಯಾವುದೇ ಶಿಫಾರಸು, ಪ್ರಭಾವ ಇರುವುದಿಲ್ಲ. ಈ ಬಾರಿ 1200ಕ್ಕೂ ಹೆಚ್ಚು ರೈತರ ಆರ್ಜಿಗಳನ್ನು ಪರಿಶೀಲಿಸಿ 21 ಜನರನ್ನು ಆಯ್ಕೆ ಮಾಡಲಾಯಿತು. ರೈತ ಪ್ರಶಸ್ತಿಯ ಎರಡನೇ ಆವೃತ್ತಿಯಲ್ಲಿ ಕೃಷಿ ಪಾಠ ಕಲಿಸುವ ಶಾಲೆಯೊಂದನ್ನು ಗುರುತಿಸಿ ಸನ್ಮಾನಿಸಲಾಗುತ್ತಿದೆ.

• ರವಿ ಹೆಗಡೆ ಪ್ರಧಾನ ಸಂಪಾದಕ, ಕನ್ನಡಪ್ರಭ-ಏಷ್ಯಾನೆಟ್ ಸುವರ್ಣ ನ್ಯೂಸ್

ರೈತರು ದೇಶದ ಬೆನ್ನೆಲುಬು



ಕಟ್ಟಡ ನಿರ್ಮಾಣಕ್ಕೆ ಸ್ಟೀಲ್ ಕಂಬಿಗಳು ಬೆನ್ನೆಲುಬು. ಅದೇ ರೀತಿ ರೈತರು ದೇಶದ ಬೆನ್ನೆಲುಬು. ಅಂತಹ ರೈತ ಸಾಧಕರಿಗೆ ರೈತ ರತ್ನ ಪ್ರಶಸ್ತಿ ನೀಡಿ ಸನ್ಮಾನಿಸಿದ ಹೆಮ್ಮೆ ನಮಗಿದೆ. ಎಲ್ಲಾ ರೈತರಿಗೂ ದೊಡ್ಡ ಸಲಾಂ. ಅವಕಾಶ ಕೊಟ್ಟಿರುವುದಕ್ಕೆ ಏಷ್ಯಾನೆಟ್ ಸುವರ್ಣ ನ್ಯೂಸ್ ಮತ್ತು ಕನ್ನಡಪ್ರಭ ತಂಡಕ್ಕೆ ಧನ್ಯವಾದಗಳು.

• ಎಸ್.ಎಸ್.ಶ್ರೀಕಾಂತ್ ವ್ಯವಸ್ಥಾಪಕ ನಿರ್ದೇಶಕರು, ಇಂಡಸ್ ಟಿಎಂಟಿ ಕಂಪನಿ

ರೈತ ಸಾಧಕರು ಜನತೆಗೆ ಸ್ಫೂರ್ತಿ



ನಮ್ಮ ಸಂಸ್ಥೆ 22 ವರ್ಷಗಳಿಂದ ಆಧುನಿಕ ಕೃಷಿ ಉಪಕರಣ ತಯಾರಿಸುತ್ತಿದೆ. ರೈತ ರತ್ನಕ್ಕೆ ಕೈಜೋಡಿಸಿರುವುದಕ್ಕೆ ಹೆಮ್ಮೆ ಇದೆ. ಪ್ರಶಸ್ತಿವಿಜೇತರು ಲಕ್ಷಾಂತರ ಜನರಿಗೆ ಸ್ಫೂರ್ತಿಯಾಗಿದ್ದಾರೆ. ಮುಂದಿನ ವರ್ಷ ರೈತ ಸಾಧಕ ಸಂಖ್ಯೆ ಹೆಚ್ಚಳವಾಗಲಿ. ಈ ಸಾಧಕ ರೈತರಿಗೆ ಸರ್ಕಾರದಿಂದ ಇನ್ನಷ್ಟು ಪ್ರೋತ್ಸಾಹ ಸಿಗಬೇಕು.

• ಎಸ್.ಎ. ವಾಸುದೇವ ಮೂರ್ತಿ ಸಿಎಂಡಿ ರತ್ನಗಿರಿ ಇಂಪೆಕ್ಟ್ಸ್ ಪ್ರೈ.ಲಿ

ರೈತನೇ ಈ ದೇಶದ ಸೆಲೆಬ್ರಿಟಿ



ರೈತ ದೇಶದ ಸೆಲಿಬ್ರಿಟಿ. ಕೃಷಿಯಲ್ಲಿ ಸಾಧನೆ ಮಾಡಿದವರನ್ನು ಮುಖ್ಯವಾಹಿನಿಗೆ ತರಬೇಕು. ನಮ್ಮ ಸಂಸ್ಥೆಯ ಬೆಳವಣಿಗೆ ರೈತರ ಕೊಡುಗೆ ಹೆಚ್ಚಿದೆ. ಅನ್ನದಾತರೇ ನಮ್ಮ ದೇಶದ ಆಸ್ತಿ. ಸಾಧಕರಿಗೆ ಕೆಲಸವೇ ವಿಶ್ರಾಂತಿ ಎಂದು ನಂಬಿದ್ದೇವೆ. ಅಂತಹ ಕೃಷಿ ಸಾಧಕರ ಸಂಖ್ಯೆ ಹೆಚ್ಚಳವಾಗಲಿದೆ.

• ಆಫ್ಸರ್ ಹಿಂದೂಸ್ತಾನಿ ವಿ ಸ್ಟಾರ್ ಲೈಫ್‌ಸ್ಟೈಲ್ ಪ್ರಾಡಕ್ಟ್ಸ್ ಪ್ರೈ.ಲಿ.

ರೈತನಿಗೆ ಸದಾ ನಮ್ಮ ಸಹಕಾರ



ರೈತರಿಗೆ ನಮ್ಮ ಸಂಸ್ಥೆಯ ಸಹಕಾರ ಸದಾ ಇರುತ್ತದೆ. ಪ್ರತಿ ವರ್ಷ 50 ರೈತರಿಗೆ ಆಗತ್ಯ ವಸ್ತು ನೀಡುತ್ತಿದೆ. ರೈತ ರತ್ನ ವಿಜೇತರಿಗೆ ತಲಾ 25000 ರು. ಮೌಲ್ಯದ ಸಾವಯವ ಉತ್ಪನ್ನ ನೀಡಲಾಗುವುದು. ರೈತ ಸಮುದಾಯವನ್ನು ಗೌರವಿಸುತ್ತಿರುವ ಕಾರ್ಯಕ್ಕೆ ಕೈಜೋಡಿಸಿರುವುದು ಹೆಮ್ಮೆ ವಿಚಾರ.

• ಕೆ.ನಾಗರಾಜ್ ವ್ಯವಸ್ಥಾಪಕ ನಿರ್ದೇಶಕ, ಅಮೃತ್ ಆರ್ಗಾನಿಕ್ ಫರ್ಟಿಲೈಸರ್ಸ್

ಸೈನಿಕನ ರೀತಿ ರೈತನಿಂದ ದೇಶಸೇವೆ



ದೇಶವನ್ನು ಮುನ್ನಡೆಸುವ ಸದ್ಗುರು ರೈತ. ಶ್ರಮ, ಸಹನೆ, ತಾಳ್ಮೆ ಇಲ್ಲದಿದ್ದರೆ ಸಣ್ಣಗಿಡ ಬೆಳೆಯುವುದಕ್ಕೂ ಸಾಧ್ಯವಿಲ್ಲ. ತಮ್ಮ ಉತ್ಪನ್ನಕ್ಕೆ ಬೆಲೆ ನಿರ್ಧಾರ ಇಲ್ಲದಿದ್ದರೂ ಒಬ್ಬ ಸೈನಿಕನ ರೀತಿಯಲ್ಲಿ ಬೆಳೆಯನ್ನು ಬೆಳೆದು ದೇಶ ಸೇವೆ ಮಾಡುತ್ತಿದ್ದಾರೆ. ರೈತರು ಸ್ವಾವಲಂಬಿಗಳಾಗಿದ್ದು, ರೈತರಿಲ್ಲ ಎಂದರೆ ದೇವನೇ ಇಲ್ಲ.

• ಡಿ.ಎಸ್.ಪ್ರದೀಪ್ ವ್ಯವಸ್ಥಾಪಕ ನಿರ್ದೇಶಕ, ವಾಸವಿ ಹೆಲ್ತ್ ಕೇರ್ ಪ್ರಾಡಕ್ಟ್

ಕೃಷಿ ಆಸಕ್ತಿ ಹೆಚ್ಚಿಸುವ ಪ್ರಶಸ್ತಿ: ಬಿ.ಸಿ.ಪಾಟೀಲ್

ರೈತ ಕೃಷಿ ಮಾಡಿದರೆ ಸಾಲದು, ಉದ್ಯಮಿಯಾಗಿ ಬೆಳೆಯಬೇಕು | ಪ್ರಧಾನಿ ನರೇಂದ್ರ ಮೋದಿಯಿಂದ ಕೃಷಿ ಕ್ಷೇತ್ರಕ್ಕೆ ₹1 ಲಕ್ಷ ಕೋಟಿ ನೆರವು

• ಕನ್ನಡಪ್ರಭ ವಾರ್ತೆ ಬೆಂಗಳೂರು

'ಕೃಷಿತೋ

ಹಬ್ಬದಲ್ಲಿ ಗಗನಕ್ಕೇರಿದ ವೀಳ್ಯದೆಲೆ ಬೆಲೆ

ಬೆಂಗಳೂರು: ರಾಜಧಾನಿಯಲ್ಲಿ ವೀಳ್ಯದ ಎಲೆಯ ಬೆಲೆ ಗಗನಕ್ಕೇರಿದ್ದು ಶಿವರಾತ್ರಿ ಸಂದರ್ಭದಲ್ಲಿ ಭಕ್ತರಿಗೆ ಪೂಜೆಗೆ ಇಡಲೇ ತತ್ವಾರ ಬಂದಂತಾಗಿದೆ. ಶಿವರಾತ್ರಿ ಕಳೆಯುತ್ತಿದ್ದಂತೆ ಶುಭ ಕಾರ್ಯಗಳ ಸಂಖ್ಯೆಯೂ ಹೆಚ್ಚುತ್ತಿದ್ದು ಇದೇ ಸಂದರ್ಭದಲ್ಲಿ ಎಲೆಯ ದರ ಹೆಚ್ಚಿರುವುದು ಸಾಮಾನ್ಯರ ಜೇಬಿಗೆ ಕತ್ತರಿ ಬಿದ್ದಿದೆ.

ನೂರು ಎಲೆಗಳನ್ನು ಒಳಗೊಂಡ ಒಂದು ಕಟ್ಟು ಎಲೆಯ ಬೆಲೆ ₹150ರಿಂದ ₹200ಗಳವರೆಗೂ ಮುಟ್ಟಿದೆ.ನಗರಕ್ಕೆ ಹೆಚ್ಚಿನ ಪ್ರಮಾಣದಲ್ಲಿ ವೀಳ್ಯದೆಲೆ ಪೂರೈಕೆಯಾಗಿರುವ ದೊಡ್ಡಬಳ್ಳಾಪುರದಲ್ಲಿ ಈ ಬಾರಿ ಸಾಕಷ್ಟು ಳುವರಿ ಬಾರದಿರುವುದರಿಂದ ಹೀಗಾಗಿದೆ ಎನ್ನುತ್ತಾರೆ ಯಶವಂತಪುರ ವ್ಯಾಪಾರಿ ಸುತಾರ್ ಸಾಬ್.

ಅಕ್ಟೋಬರ್ ಹಾಗೂ ನವೆಂಬರ್ ತಿಂಗಳಲ್ಲಿ ಬಿಟ್ಟು ಬಿಡದಂತೆ ಸುರಿದ ಮಳೆಯಿಂದಾಗಿ ಎಲೆಗಳ ಬಳ್ಳಿ ಕೊಳೆತಿದ್ದು, ಬಳ್ಳಿ ಸರಿಯಾಗಿ ಹಬ್ಬಲಿಲ್ಲ. ಅಲ್ಲದೆ ಜನವರಿ ತಿಂಗಳ ನಂತರ ಸಾಮಾನ್ಯವಾಗಿ ಎಲೆ ಬಳ್ಳಿಗಳು ಚಿಗುರಿತ್ತವೆ. ಆದರೆ ಚಳೀಯೂ ಕಡಿಮೆ ಇದ್ದುದರಿಂದ ಎಲ್ಲ ಬಳ್ಳಿಗಳೂ ಚಿಗುರಲೂ ಇಲ್ಲ. ಇದರಿಂದ ಮಾರುಕಟ್ಟೆಗೆ ವೀಳ್ಯದ ಎಲೆ ಪೂರೈಕೆ ಸೂಕ್ತಪ್ರಮಾಣದಲ್ಲಿ ಆಗದೇ ಬೆಲೆ ಗಗನಕ್ಕೆ ಏರಿದೆ ವೀಳ್ಯದ ಎಲೆ ಬೆಳೆಗಾರ ರಾಮಕೃಷ್ಣ.

ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಬೆಳೆಯುವ ಎಲೆ ಸಾಕಾಗುವುದಿಲ್ಲ. ಹೀಗಾಗಿ ತುಮಕೂರು, ಹಿರಿಯೂರು, ದಾವಣಗೆರೆ, ಚನ್ನಗಿರಿ ಭಾಗದಿಂದ ಹೆಚ್ಚಿನ ಎಲೆ ಇಲ್ಲಿಗೆ ಬರುತ್ತವೆ. ಆದರೆ ಈ ಬಾರಿ ತುಮಕೂರು, ದಾವಣಗೆರೆ ಭಾಗದಲ್ಲೂ ಮಳೆ ಹೆಚ್ಚಾಗಿದ್ದರಿಂದ ಎಲೆ ಬಳ್ಳಿ, ಬೇರುಗಳು ಕೊಳೆತು ಹೋಗಿವೆ. ಈಗಷ್ಟೇ ಮತ್ತೆ ಬಳ್ಳಿಗಳು ಚಿಗುರೊಡೆಯುತ್ತಿವೆ. ಇನ್ನು ಒಂದು ತಿಂಗಳ ಕಾಲವಾದರು ವೀಳ್ಯದ ಎಲೆ ಬೆಲೆ ಹೀಗೆ ಇರಲಿದೆ ಎಂಬುದು ಯಶವಂತಪುರದ ವ್ಯಾಪಾರಿ ನಂಜೇಗೌಡರ ಅಭಿಪ್ರಾಯ.



ದೊಡ್ಡಬಳ್ಳಾಪುರದ ದೊಡ್ಡಬೆಳವಂಗಲ ಹಾಗೂ ಮಧುರೆ ಹೋಬಳಿಯಲ್ಲಿನ ರೈತರು ಅಡಿಕೆ ತೋಟಗಳಲ್ಲಿ ವೀಳ್ಯದ ಎಲೆಯನ್ನು ಮಿಶ್ರ ಬೆಳೆಯಾಗಿ ಬೆಳೆಸುತ್ತಾರೆ. ಎಲೆಯ ಬಳ್ಳಿಗೆ ಆಸರೆ ಬೇಕಾಗಿರುವುದರಿಂದ ಬಹುತೇಕ ರೈತರು ಎಲೆಗಳನ್ನು ಅಡಿಕೆ ತೋಟಗಳಲ್ಲೇ ಬೆಳೆಯುತ್ತಾರೆ. ಎಲೆ ಬೆಳೆಯುವ ರೈತರು ಅಡಿಕೆಗೆ ಹೆಚ್ಚಿನ ಗೊಬ್ಬರ, ಬೇಸಿಗೆಯಲ್ಲಿ ನೀರು ಸೇರಿದಂತೆ ಮುತುವರ್ಜಿ ವಹಿಸಿ ಬೇಸಾಯ ಮಾಡುತ್ತಾರೆ. ಇಲ್ಲವಾದರೆ ಅಡಿಕೆ, ಎಲೆ ಎರಡೂ ಸರಿಯಾಗಿ ಬೆಳೆ ಬಾರದೆ ಅಡಿಕೆ ಇಳುವರಿಯು ಕುಸಿತವಾಗುತ್ತದೆ. ವೀಳ್ಯದ ಎಲೆಗಳು ಅಗಲವಾಗಿ ಬಂದರಷ್ಟೆ ಮಾರುಕಟ್ಟೆಯಲ್ಲಿ ಬೇಡಿಕೆ, ಬೆಲೆ ಎರಡೂ ದೊರೆಯಲು ಸಾಧ್ಯ.

02-03-2022 Vsv Pg 03

02-03-2022 Hd Pg 02

ರೈತರ ಸ್ವಾವಲಂಬನೆ ಸರಕಾರದ ಆಶಯ

ತುಮಕೂರು: ರೈತರು ಆಧುನಿಕ ತಂತ್ರಜ್ಞಾನ ಬಳಸಿ ಕೃಷಿಯಲ್ಲಿ ತೊಡಗಲು ತರಬೇತಿ ನೀಡಲಾಗುವುದು ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಹೇಳಿದರು.

ಶಿರಾ ತಾಲೂಕಿನ ಚಿಕ್ಕನಹಳ್ಳಿಯಲ್ಲಿಂದು ಉಗ್ರೇಗೌಡ ಸ್ಮಾರಕ ಜಿಲ್ಲಾ ಕೃಷಿ ತರಬೇತಿ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿ, ರೈತ ಮಕ್ಕಳ ಅನುಕೂಲಕ್ಕಾಗಿ ಚಿಕ್ಕನಹಳ್ಳಿಯಲ್ಲಿ ಕೃಷಿ ಕಾಲೇಜು ಸ್ಥಾಪನೆ ಮಾಡಲು ಮುಖ್ಯಮಂತ್ರಿಗಳಿಗೆ ಶೀಘ್ರವೇ ಪ್ರಸ್ತಾವನೆ ಸಲ್ಲಿಸುತ್ತೇನೆಂದರು.

ಸರ್ಕಾರದಿಂದ ಈಗಾಗಲೇ ಬಡತನ ರೇಖೆಗಿಂತ ಕೆಳಗಿರುವ ಎಲ್ಲಾ ವರ್ಗದ ಕೃಷಿಕ ಮಕ್ಕಳ ಪಿಯುಸಿ ತರಗತಿಯಿಂದ ಪದವಿ, ವೃತ್ತಿಪರ ಕೋರ್ಸ್‌ಗಳ ವ್ಯಾಸಂಗಕ್ಕಾಗಿ ಮುಖ್ಯಮಂತ್ರಿ ವಿದ್ಯಾನಿಧಿ ಯೋಜನೆಯಲ್ಲಿ 2000 ರೂ.ಗಳಿಂದ 11,500 ರೂ. ಗಳವರೆಗೆ ಶಿಷ್ಯವೇತನ ನೀಡಲಾಗುತ್ತಿದೆ. ಅಲ್ಲದೆ ಪ್ರಸಕ್ತ ವರ್ಷದಲ್ಲಿ ಪ್ರೌಢಶಾಲೆ ಶಿಕ್ಷಣದಿಂದ ವಂಚಿತರಾದ ರೈತರ ಹೆಣ್ಣುಮಕ್ಕಳಿಗೆ ಮುಂದಿನ ವಿದ್ಯಾಭ್ಯಾಸಕ್ಕಾಗಿ 2000 ರೂ. ಶಿಷ್ಯವೇತನ ಸೌಲಭ್ಯವನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು.

ರೈತರು ಸ್ವಾವಲಂಬಿಗಳಾಗಬೇಕು: ರೈತರು ಸ್ವಾವಲಂಬಿಯಾಗಿ ಬದುಕಬೇಕೆಂಬ ದೃಷ್ಟಿಯಿಂದ ಕೇಂದ್ರ ಸರ್ಕಾರದ 6000 ರೂ. ಹಾಗೂ ರಾಜ್ಯ ಸರ್ಕಾರದ 4000 ರೂ. ಸೇರಿದಂತೆ ವಾರ್ಷಿಕ 10,000 ರೂ. ಪ್ರೋತ್ಸಾಹಧವನ್ನು ರೈತರ ಖಾತೆಗೆ ನೇರ ವರ್ಗಾವಣೆ ಮಾಡಲಾಗುತ್ತಿದೆ. ಕೆಲವು ರೈತರ ಖಾತೆಗೆ ಈ ಹಣ ಜಮೆಯಾಗುತ್ತಿಲ್ಲವೆಂಬ ಅಪಸ್ವರ ಕೇಳಿಬರುತ್ತಿದೆ. ರೈತರು ಚಾಲ್ತಿಯಲ್ಲಿರುವ ತಮ್ಮ ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆ ಮಾಡಿದರೆ ಮಾತ್ರ ಈ ಸೌಲಭ್ಯ



"ಆಹಾರೋತ್ಪಾದನೆಯಿಂದ ಕೃಷಿ ಕ್ಷೇತ್ರ ಶ್ರೀಮಂತವಾಗಿದೆ. ಆದರೂ ಕೃಷಿಕರು ಮಾತ್ರ ಶ್ರೀಮಂತರಾಗುತ್ತಿಲ್ಲ. ರೈತರು ಸಮಗ್ರ ಕೃಷಿ ನೀತಿ ಅಳವಡಿಸಿಕೊಳ್ಳುವುದರಿಂದ ಆರ್ಥಿಕವಾಗಿ ಸಬಲರಾಗಬಹುದು. ಒಂದೇ ಬೆಳೆಯನ್ನು ಅವಲಂಬಿಸದೆ ಹಲವಾರು ಬೆಳೆ ಬೆಳೆಯಬೇಕು.
■ ಬಿ.ಸಿ.ಪಾಟೀಲ್, ಕೃಷಿ ಸಚಿವ

ದೊರೆಯಲಿರುವುದರಿಂದ ಎಲ್ಲಾ ರೈತರು ಕಡ್ಡಾಯವಾಗಿ ತಮ್ಮ ಖಾತೆಗೆ ಆಧಾರ್ ಜೋಡಣೆ ಮಾಡಿ ಸೌಲಭ್ಯ ಪಡೆಯಬೇಕೆಂದರು.

164 ಮೆಟ್ರಿಕ್ ಟನ್ ಆಹಾರ ಉತ್ಪಾದನೆ: ಕೋವಿಡ್ ಪರಿಸ್ಥಿತಿಯಲ್ಲೂ ರಾಜ್ಯದ ರೈತರು 164 ಲಕ್ಷ ಮೆಟ್ರಿಕ್ ಟನ್ ಆಹಾರ ಉತ್ಪಾದನೆ ಮಾಡಿದ್ದಾರೆ. ಶೇ.10 ರಷ್ಟು ಹೆಚ್ಚುವರಿ ಆಹಾರ ಉತ್ಪಾದನೆಯಾಗಿದೆ. ಕಬ್ಬು, ಭತ್ತದ ಬೆಳೆಯನ್ನೇ ಅವಲಂಬಿಸಿರುವ ಮಂಡ್ಯ ಜಿಲ್ಲೆಯಲ್ಲಿ ನೀರಾವರಿ ಸೌಲಭ್ಯವಿದ್ದರೂ 2014-15ರಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗಿ ವರದಿಯಾಗಿವೆ ಎಂದರು.